ಕಡೂರು ತಾಲ್ಲೂಕಿನಲ್ಲಿ ಅಚ್ಚುಕಟ್ಟು ಪ್ರದೇಶ ನಿರ್ವಹಣೆ.

2381(2208) ಶ್ರೀ ಮಲ್ಲಿಕಾರ್ಜುನ ಕೆ.ಬಿ. (ಬೀರೂರು) :— ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಚಿಕ್ಕಮಗಳೂರು ಜಿಲ್ಲೆ ಕಡೂರು ತಾಲ್ಲೂಕು ಮದಗದಕೆರೆ ಮತ್ತು ಅಯ್ಯನಕೆರೆಯ ಅಚ್ಚುಕಟ್ಟು ಪ್ರದೇಶವೆಷ್ಟು; ಈ ಅಚ್ಚುಕಟ್ಟು ಪ್ರದೇಶವು ಜಾಸ್ತಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದ ಪಕ್ಷದಲ್ಲಿ ಇದರ ನಿರ್ವಹಣೆ ಮತ್ತು ಉಸ್ತುವಾರಿಯನ್ನು ಮಧ್ಯಮ ಮತ್ತು ಭಾರಿ ನೀರಾವರಿ ಇಲಾಖೆಗೆ ವಹಿಸುವ ಬಗ್ಗೆ ಸರ್ಕಾರದ ಮುಂದೆ ಪ್ರಸ್ತಾವನೆ ಇದೆಯೇ; ಇಲ್ಲದಿದ್ದಲ್ಲಿ, ಈ ಬಗ್ಗೆ ಸರ್ಕಾರದ ನಿಲುವೇನು?

ಶ್ರೀ ಎಸ್. ಕುಮಾರ್ ಬಂಗಾರಪ್ಪ (ಸಣ್ಣ ನೀರಾವರಿ ರಾಜ್ಯ ಸಚಿವರು) :—

ಅ) ಚಿಕ್ಕಮಗಳೂರು ಜಿಲ್ಲೆ ಕಡೂರು ತಾಲ್ಲೂಕು ಮದಗದಕೆರೆಯ ಅಚ್ಚುಕಟ್ಟು 476.00 ಹೆಕ್ಟೇರು ಮತ್ತು ಅಯ್ಯನಕೆರೆಯ ಅಚ್ಚುಕಟ್ಟು 829.00 ಹೆಕ್ಟೇರು ಇರುತ್ತದೆ. ಈ ಅಚ್ಚುಕಟ್ಟು ಪ್ರದೇಶವು ಜಾಸ್ತಿ ಇರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಆ) ಸದರಿ ಕೆರೆಗಳ ಅಚ್ಚುಕಟ್ಟುಗಳು ಸಣ್ಣ ನೀರಾವರಿ ಕೆರೆಗಳ ಅಚ್ಚುಕಟ್ಟಿನ ಮಿತಿಯಲ್ಲಿ ಬರುವ ಕಾರಣ ನಿರ್ವಹಣೆ ಮತ್ತು ಉಸ್ತುವಾರಿಯನ್ನು ಭಾರಿ ನೀರಾವರಿ ಇಲಾಖೆಗೆ ವಹಿಸುವ ಬಗ್ಗೆ ಪ್ರಸ್ತಾವನೆ ಇರುವುದಿಲ್ಲವಾದುದರಿಂದ ಪ್ರಶ್ನೆ ಉದ್ಭವಿಸುವುದಿಲ್ಲ.

ಪಂಪ್‌ಸೆಟ್ಟುಗಳ ವಿದ್ಯುತ್ ಸಂಪರ್ಕಕ್ಕೆ ದೊಡ್ಡ ಪ್ರಮಾಣದ ಮೊತ್ತವನ್ನು ವಸೂಲು ಮಾಡುತ್ತಿರುವ ಬಗ್ಗೆ

2384(2849) ಶ್ರೀ ಮನೋಹರ್ ಹುನ್ನಪ್ಪ ಕಾಡೋಲ್ಕರ್ (ಉಚ್ಚಗಾಂವ್) :— ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಪಂಪುಸೆಟ್ಟುಗಳ ವಿದ್ಯುತ್ ಸಂಪರ್ಕಕ್ಕೆ ರೂ.30,000-00ದವರೆಗಿನಷ್ಟು ದೊಡ್ಡ ಪ್ರಮಾಣದ ಮೊತ್ತವನ್ನು ವಸೂಲು ಮಾಡಲಾಗುತ್ತಿರುವುದು ನಿಜವೇ?

ಆ) ಈ ಮೊತ್ತವನ್ನು ಕಡಿಮೆ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ವೀರಕುಮಾರ ಅ. ಪಾಟೀಲ್ (ಇಂಧನ ರಾಜ್ಯ ಸಚಿವರು) :—

ಅ) 'ತತ್ಕಾಲ್' ಯೋಜನೆಯಡಿ, ನೀರಾವರಿ ಪಂಪುಸೆಟ್ಟಿನ ಅರ್ಜಿದಾರನು ರೂ. 25,000-00 ಅಥವಾ ಎಲ್.ಟಿ. ಲೈನಿನ ವಿಸ್ತರಣೆಗೆ ತಗಲುವ ವೆಚ್ಚ-ಇವುಗಳಿರಡರಲ್ಲಿ ಯಾವುದು ಹೆಚ್ಚೋ ಅದನ್ನು ಪಾವತಿಸಿ ವಿದ್ಯುತ್ ಸಂಪರ್ಕವನ್ನು ಪಡೆಯಬಹುದಾಗಿರುತ್ತದೆ. ಈ ಯೋಜನೆಯು ಸಂಪೂರ್ಣವಾಗಿ ಐಚ್ಛಿಕವಾಗಿರುತ್ತದೆ.

ಆ) ಮೊತ್ತವನ್ನು ಕಡಿಮೆ ಮಾಡುವ ಬಗ್ಗೆ ಯಾವುದೇ ಪ್ರಸ್ತಾವನೆಯು ಸದ್ಯಕ್ಕಿರುವುದಿಲ್ಲ.